# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1043 |
| ಸದಸ್ಯರ ಹೆಸರು | : ಶ್ರೀ ವೈ. ಎಂ. ಸತೀಶ್ |
| ಉತ್ತರಿಸಬೇಕಾದ ದಿನಾಂಕ | : 25.07.2024 |
| ಉತ್ತರಿಸುವ ಸಚಿವರು | : ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗುತ್ತಿದ್ದು, ಈ ಸಂಬಂಧ ಯಾವುದಾದರೂ ಹೊಸ ಪ್ರಯೋಗಗಳನ್ನು ಅಥವಾ ಹೊಸ ವಿಧಗಳನ್ನು ಬಳಲಾಗುತ್ತಿದೆಯೇ; ಹಾಗಿದ್ದಲ್ಲಿ, ವಿವರಗಳೊಂದಿಗೆ ಮಾಹಿತಿ ಒದಗಿಸುವುದು; | ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗುತ್ತಿದ್ದು, ಹೊಸ ಪ್ರಯೋಗಗಳಾಗಿ Sub Surface Dykes ಹಾಗೂ Piano Key Type Weir ಅನ್ನು ನಿರ್ಮಿಸಲಾಗಿದೆ ಹಾಗೂ ನೀರಿನ ಸಂರಕ್ಷಣೆ ಮತ್ತು ಸುಸ್ಥಿರತೆಗೆ ಅಂತರ್ಜಲ ಮರುಪೂರಣದ ಪರಿಣಾಮಕಾರಿ ತಂತ್ರಗಳಾಗಿ ಮಹಾರಾಷ್ಟ್ರದ ಶಿರಪೂರ ಮಾದರಿಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಲ್ಲಿ ನಾಲಾಗಳನ್ನು ಆಳಗೊಳಿಸುವುದು, ಅಗಲೀಕರಣಗೊಳಿಸುವುದು, ಚೆಕ್ ಡ್ಯಾಂಗಳನ್ನು ನಿರ್ಮಿಸಿ, ಅವುಗಳ ಮೇಲ್ಭಾಗದಲ್ಲಿ ರಿಚಾರ್ಜ್ ಶಾಫ್ಟ್ ಗಳನ್ನು ನಿರ್ಮಾಣ ಮಾಡಲಾಗುತ್ತಿದೆ.<br><br>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ. | ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಚೆಕ್ ಡ್ಯಾಂಗಳ ಜೊತೆಗೆ ಹೊಸ ವಿಧದ ಸಬ್ ಸರ್ಫೆಸ್ ಡ್ಯಾಂ ಮಾದರಿಗಳನ್ನು ನಿರ್ಮಾಣ ಮಾಡುತ್ತಿದ್ದು ಇದರಿಂದಾಗಿ ಬರಪೀಡಿತ ಜಾಗದಲ್ಲಿಯು ಅಂತರ್ಜಲವು ಹೆಚ್ಚಿನ ಮಟ್ಟದಲ್ಲಿ ಏರಿಕೆಯಾಗುತ್ತಿದ್ದು. ಈ ಹೊಸ ವಿಧದ ಸಬ್ ಸರ್ಫೆಸ್ ಡ್ಯಾಂಗಳ ನಿರ್ಮಾಣದ ಅಧ್ಯಯನ ನಡೆಸಿ ಅಳವಡಿಸಿಕೊಳ್ಳಲು ಸರ್ಕಾರದ ಕ್ರಮಗಳೇನು; | Sub Surface Dykeನ ನಿರ್ಮಾಣದಿಂದ ಸುತ್ತ ಮುತ್ತಲಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟವು ಹೆಚ್ಚಾಗಿರುತ್ತದೆ. ಆದುದರಿಂದ ಈ ರೀತಿಯ Sub Surface Dykeಗಳನ್ನು ಅವಶ್ಯಕತೆ ಇರುವೆಡೆ ಸ್ಥಳ ಸೂಕ್ತತೆಯ ಆಧಾರದ ಮೇಲೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಇ. | ಕೇಂದ್ರ ಸರ್ಕಾರದ ನೀತಿ ಆಯೋಗವು ಪ್ರಶಂಸೆ ಮಾಡಿರುವ ಈ ಸಬ್ ಸರ್ಫೇಸ್ ಡ್ಯಾಂಗಳ ಮಾದರಿ ಪ್ರಯೋಗವನ್ನು ಬಳ್ಳಾರಿ ಜಿಲ್ಲೆಯ ವೇದಾವತಿ ನದಿಯಲ್ಲಿ ನಿರ್ಮಾಣ ಮಾಡಲು ಸರ್ಕಾರದ ಕ್ರಮಗಳೇನು? (ವಿವರಗಳೊಂದಿಗೆ ಮಾಹಿತಿ ನೀಡುವುದು) | ಈ ಕುರಿತು ಅಧ್ಯಯನ ಕೈಗೊಂಡು ಅವುಗಳ ನಿರ್ಮಾಣಕ್ಕಾಗಿ ಪರಿಶೀಲಿಸಲಾಗುವುದು. |

ಕಡತ ಸಂಖ್ಯೆ:MID 85 LCQ 2024

(ಎನ್.ಎಸ್.ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು.

## ಅನುಬಂಧ

### 1. Piano Key Type Weir

**ಕಾಮಗಾರಿಯ ಹೆಸರು : ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕು ಕೊಲ್ಲೂರು ಗ್ರಾಮದ ದಳಿ ಎಂಬಲ್ಲಿ ಪಿ.ಕೆ. ವಿಯರ್ ನಿರ್ಮಾಣ**

2017-18ನೇ ಸಾಲಿನಲ್ಲಿ ಪಶ್ಚಿಮವಾಹಿನಿ ಯೋಜನೆಯಡಿ ಉಡುಪಿ ಜಿಲ್ಲೆಯ ಬೈಂದೂರು ವಿಧಾನಸಭಾ ಕ್ಷೇತ್ರದ ಕುಂದಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದ ದಳಿ ಎಂಬಲ್ಲಿ ವಿಯರ್ ಕಾಮಗಾರಿ ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಯನ್ನು ಪ್ರಪ್ರಥಮ ಬಾರಿಗೆ ಪ್ರಾಯೋಗಿಕವಾಗಿ ಪಿಯಾನೋ ಕೀ ಮಾದರಿಯಲ್ಲಿ ನಿರ್ಮಿಸಲಾಗಿರುತ್ತದೆ. ಹಳ್ಳದ ಅಗಲ ಕಡಿಮೆ ಇದ್ದು, ಹೆಚ್ಚು ಪ್ರಮಾಣದ ಹರಿವನ್ನು ಹರಿಸಬೇಕಾದ ಸಂದರ್ಭಗಳಲ್ಲಿ, ಸದರಿ ಮಾದರಿಯ ಪಿಯಾನೋ ಕೀ ವಿಯರ್ ಸಹಕಾರಿಯಾಗಿರುತ್ತದೆ.

ಸದರಿ ವಿಯರ್ ನಿರ್ಮಾಣದಿಂದ 0.48 ಎಂ.ಸಿ.ಎಫ್.ಟಿ. ನೀರನ್ನು ಶೇಖರಿಸಿ 60.00 ಹೆಕ್ಟೇರ್ ಕೃಷಿ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದರೊಂದಿಗೆ ಅಂತರ್ಜಲ ಅಭಿವೃದ್ಧಿಪಡಿಸಲು ಸಹಕಾರಿಯಾಗುತ್ತಿದೆ. ಈ ವಿಯರ್‌ನಲ್ಲಿ ಪಿಯಾನೋ ಕೀ ಮಾದರಿಯಲ್ಲಿ 18 ಸಂಖ್ಯೆಯ Inlet ಕೀಗಳು ಹಾಗೂ 18 ಸಂಖ್ಯೆಯ Outlet ಕೀಗಳಿರುತ್ತದೆ. **ಛಾಯಾಚಿತ್ರ ಲಗತ್ತಿಸಿದೆ**.

### 2. Sub Surface Dykes

ಅಂತರ್ಜಲದ ನೈಸರ್ಗಿಕ ಹರಿವಿಕೆಯನ್ನು ಅಡ್ಡಿಪಡಿಸುವ ಉದ್ದೇಶದಿಂದ ಜಲಚರದಲ್ಲಿ ನಿರ್ಮಿಸಲಾದ ರಚನೆಯಾಗಿರುತ್ತದೆ.

ಕಾಮಗಾರಿಯ ಹೆಸರು : ಅ) ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಹೆಚ್. ನಾಗಸಂದ್ರ ಹೋಬಳಿ ಬಳಿ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ಭೂಗತ ತಡೆಗೋಡೆ.

ಆ) ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಚಿಕ್ಕಕುರುಗೋಡು ಹತ್ತಿರ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ಭೂಗತ ತಡೆಗೋಡೆ ನಿರ್ಮಾಣ ಕಾಮಗಾರಿ.

ಇ) ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಹೋಬಳಿ ಗೌಡಗೆರೆ ಬಳಿ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ಭೂಗತ ತಡೆಗೋಡೆ

ಸದರಿ Sub Surface Dykes ಗಳು ನದಿಯ ಪಾತ್ರದ ಅಕ್ಕಪಕ್ಕದ ಜಮೀನುಗಳಲ್ಲಿ, ಮರಳು ಸವೆತದಿಂದ ನದಿ ದಡಗಳಲ್ಲಿ ಉಂಟಾಗುತ್ತಿದ್ದ ಕೊರೆತವನ್ನು ತಡೆಗಟ್ಟಲು ಹಾಗೂ ಸುಮಾರು 1400 ಅಡಿಗಳ ವರೆಗೂ ಕುಸಿದಿದ್ದ ಅಂತರ್ಜಲ ಮಟ್ಟವನ್ನು ಮರುಪೂರ್ಣಗೊಳಿಸಲು ಕೈಗೊಳ್ಳಲಾಗಿತ್ತು.

ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡ ನಂತರ ಮರಳಿನ ಸವೆತ ಕಡಿಮೆಯಾಗಿ, ಮರಳು ಶೇಖರಣೆಯಾಗುತ್ತಿದ್ದು, ಶೇಖರಣೆಯಾಗಿರುವ ಮರಳಿನ ಭೂಗರ್ಭದಲ್ಲಿ ನೀರಿನ ಹರಿವು ನಿಂತು (Infiltrate) ಅಂತರ್ ವ್ಯಾಪಿಸಿ ಮರಳು ಹಾಸಿಗೆಗೆ ಸೇರಿರುತ್ತದೆ ಹಾಗೂ ಇದರಿಂದಾಗಿ ಸುತ್ತಮುತ್ತಲಿನ ಬಹಳಷ್ಟು ಬೋರ್‌ವೆಲ್‌ಗಳು ಮರುಪೂರ್ಣಗೊಂಡು ನೀರಿನ ಅಂತರ್ಜಲ ಮಟ್ಟವು (Water Table) ಸುಧಾರಿಸಿರುತ್ತದೆ. ಇದರಿಂದಾಗಿ ರೈತರಿಗೆ ಬಹಳ ಅನುಕೂಲವಾಗಿರುತ್ತದೆ.

**3.ನೀರಿನ ಸಂರಕ್ಷಣೆ ಮತ್ತು ಸುಸ್ಥಿರತೆಗೆ ಅಂತರ್ಜಲ ಮರುಪೂರಣದ ಪರಿಣಾಮಕಾರಿ ತಂತ್ರಗಳಾಗಿ ಮಹಾರಾಷ್ಟ್ರದ ಶಿರಪೂರ ಮಾದರಿಯ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.**

ಅ. ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನಲ್ಲಿ ಮಹಾರಾಷ್ಟ್ರದ ಶಿರಪೂರ ಮಾದರಿಯಂತೆ ಅಂತರ್ಜಲ ಅಭಿವೃದ್ಧಿ ಪಡಿಸಲು ಮಾದನಹಿಪ್ಪರಗಾ-ಕೆರೂರ, ರುದ್ರುವಾಡಿ-ಜಂಬಗಾ, ಕಿಣ್ಣಿ ಸುಲ್ತಾನ, ಧುತ್ತರಗಾಂವ, ಸರಸಂಬಾ, ಸಾಲೇಗಾಂವ, ಪಡಸಾವಳಿ, ಸಂಗೋಳಗಿ-ದೇಗಾಂವ, ಸಕ್ಕರಗಾ ಗ್ರಾಮಗಳಲ್ಲಿ ಒಟ್ಟು56.38 ಕಿ.ಮೀ. ನಾಲಾ ಆಳಗೊಳಿಸಿ, ರಿಚಾರ್ಜ್ ಶಾಫ್ಟ್‌ನಿರ್ಮಾಣ ಹಾಗೂ 51 ಚೆಕ್‌ಡ್ಯಾಂ ನಿರ್ಮಿಸುವ ಕಾಮಗಾರಿ. ಅಂದಾಜು ಮೊತ್ತ ರೂ.2059.00ಲಕ್ಷ, ಕಾಮಗಾರಿ ಪೂರ್ಣಗೊಂಡಿದೆ.

ಆ. ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕು ಸಾವಳೇಶ್ವರ ಗ್ರಾಮದ ಹತ್ತಿರಇರುವ ನಾಲಾಕ್ಕೆ ಶಿರಪೂರ ಮಾದರಿಯ ನಾಲಾ ಹೂಳೆತ್ತುವುದು ಮತ್ತು ಚೆಕ್‌ಡ್ಯಾಂ ನಿರ್ಮಾಣ. ಅಂದಾಜು ಮೊತ್ತ ರೂ.178.00 ಲಕ್ಷ, ಕಾಮಗಾರಿ ಪ್ರಗತಿಯಲ್ಲಿದೆ.

ಇ. ಕಲಬುರಗಿ ಜಿಲ್ಲೆ, ಆಳಂದ ತಾಲ್ಲೂಕಿನ ಸರಸಂಬಾ ಹಾಗೂ ನಾಗಲೇಗಾಂವ ಗ್ರಾಮಗಳ ಹತ್ತಿರಇರುವ ನಾಲಾಕ್ಕೆ ಶಿರಪೂರ ಮಾದರಿಯ ನಾಲಾ ಹೂಳೆತ್ತುವುದು ಮತ್ತು ಚೆಕ್‌ಡ್ಯಾಂ ನಿರ್ಮಾಣ. ಅಂದಾಜು ಮೊತ್ತ ರೂ.980.00ಲಕ್ಷ, ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿದೆ.


ಈ. ಕಲಬುರಗಿ ಜಿಲ್ಲೆ, ಆಳಂದ ತಾಲ್ಲೂಕಿನಕಿಣ್ಣಿಅಬ್ಬಾಸ ಮತ್ತು ಸಕ್ಕರಗಾ ಹಾಗೂ ಅಂಬೇವಾಡ ಗ್ರಾಮಗಳ ಹತ್ತಿರಇರುವ ನಾಲಾಕ್ಕೆ ಶಿರಪೂರ ಮಾದರಿಯ ನಾಲಾ ಹೂಳೆತ್ತುವುದು ಮತ್ತು ಚೆಕ್ ಡ್ಯಾಂ ನಿರ್ಮಾಣ. ಅಂದಾಜು ಮೊತ್ತ ರೂ.597.00ಲಕ್ಷ, ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿದೆ.


ಉ. ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕು ಚಿಂಚೋಳಿ ಬಿ. ಹಾಗೂ ಚಿಂಚೋಳಿ ಕೆ.ಗ್ರಾಮಗಳ ಹತ್ತಿರಇರುವ ನಾಲಾಕ್ಕೆ ಶಿರಪೂರ ಮಾದರಿಯ ನಾಲಾ ಹೂಳೆತ್ತುವುದು ಮತ್ತು ಚೆಕ್ ಡ್ಯಾಂ ನಿರ್ಮಾಣ. ಅಂದಾಜು ಮೊತ್ತ ರೂ.300.00 ಲಕ್ಷ ,ಕಾಮಗಾರಿ ಟೆಂಡರ್ ಪ್ರಕ್ರಿಯೆಯಲ್ಲಿದೆ.

ಈ ಯೋಜನೆಯಲ್ಲಿ ನಾಲಾಗಳನ್ನು ಆಳಗೊಳಿಸುವುದು, ಅಗಲೀಕರಣಗೊಳಿಸುವುದು, ಚೆಕ್ ಡ್ಯಾಂಗಳನ್ನು ನಿರ್ಮಿಸಿ, ಅವುಗಳ ಮೇಲ್ಭಾಗದಲ್ಲಿ ರಿಚಾರ್ಜ್ ಶಾಫ್ಟ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

1. ಪಿ.ಕೆ. ವಿಯರ್ ನಿರ್ಮಾಣ ಕಾಮಗಾರಿಯ ಛಾಯಾಚಿತ್ರ







## 2. Sub Surface Dyke

